**ಓ.ಎಸ್. 38/2016**
**ಪಿ.ಡಬ್ಲ್ಯು 03**

ದಿನಾಂಕ: 17-09-2025 ರಂದು ಸಾಕ್ಷಿದಾರರನ್ನು ಕರೆಯಿಸಿ ವಚನ ಬೋದಿಸಲಾಯಿತು.

**ಪಾಟೀ ಸವಾಲು: ಪ್ರತಿವಾದಿ ನಂ 1ಎ ಪರ ವಕೀಲರಾದ ಶ್ರೀ. ಆರ್ ಎಮ್ ವಾಯ್ .ರವರಿಂದಃ-**

ನನ್ನ ಸ್ವಂತ ಊರು ಗುರಗುಂಟಾ. ನಾನು ಹುಟ್ಟಿ ಬೆಳೆದಿದ್ದು ಗಂಗನಾಳ, ಸುರಪುರ ತಾಲೂಕ ಎಂದರೆ ಸರಿ. ಈ ದಾವೆ ಹಾಕಿದವರ ಮನೆತನದ ವಿಚಾರ ನನಗೆ ಗೊತ್ತು. ರಾಜಾ ಸಜ್ಜಪ್ಪ ನಾಯಕ ಮತ್ತು ರಾಜಾ ಸೋಮಲಿಂಗನಾಯಕ ಇವರ ಮಧ್ಯೆ ಈ ಹಿಂದೆಯೂ ಕೂಡಾ ದಾವೆಗಳು ನೆಡದಿದ್ದವು ಎಂದರೆ ಸರಿ. 1970 ರಲ್ಲಿ ನೀವು ಭಾಗ ಆಗಿದ್ದೀರಿ ಅಂತಾ ಮಾನ್ಯ ಜಿಲ್ಲಾ ನ್ಯಾಯಾಲಯದವರು ರಾಜಾ ಸಜ್ಜಪ್ಪನಾಯಕ ಪಾಲು ವಿಭಾಗ ಮಾಡಿಕೊಂಡಿದ್ದಾರೆ ಅಂತಾ ತೀರ್ಮಾನ ಅಗಿದೆ ಎಂದರೆ ಸರಿ. ಅದು ಎಲ್ ಎ ಸಿ ಕೇಸನಲ್ಲಿ ಎಂದರೆ ಸರಿ. ರಾಣಿ ಸರೋಜಾದೇವಿ ಪ್ರತಿವಾದಿ ನಂ 1 ರವರ ಜೊತೆ ಇರುತ್ತಿದ್ದಳು ಎಂದರೆ ಸರಿ. ಆಕೆಗೆ ಪ್ರತಿವಾದಿ ನಂ 1 ಗಂಡ ಅಂತಾ ಅಧಾರ ಕಾರ್ಡ ಇದೆ ಎಂದರೆ ಸರಿ. ಪ್ರತಿವಾದಿ ನಂ 1 ರಾಜಾ ಸೋಮಲಿಂಗನಾಯಕ ಈಗ ಜೀವಂತ ಇಲ್ಲಾ ಎಂದರೆ ಸರಿ. ಪ್ರತಿವಾದಿ ನಂ 1 ತನ್ನ ಜೀವಿತಾ ಅವಧಿಯಲ್ಲಿ ರಾಣಿ ಸರೋಜಾದೇವಿಗೆ ಹಾಗೂ ರಾಜಾ ದೇವೇಂದ್ರನಾಯಕಗೆ ಮೃತ್ಯುಪತ್ರ ಹಾಗೂ 5 ಎಕರೆ 35 ಗುಂಟೆ ಮಾಡಿಕೊಟ್ಟಿದ್ದಾರೆ ಎಂದರೆ ಗೊತ್ತಿಲ್ಲಾ . ಪ್ರತಿವಾದಿ ನಂ 8 ರಿಂದ 11 ಈ ರಾಣಿಯರು ನನಗೆ ಗೊತ್ತಿಲ್ಲಾ. ನನಗೆ ಈ ದಾವೆ ಬಗ್ಗೆ ಏನು ಗೊತ್ತಿಲ್ಲಾ. ಅಮರೇಶ ನಾಯಕ ಹೇಳಿದಕ್ಕೆ ಬಂದು ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿ. ನನ್ನ ಪ್ರಮಾಣ ಪತ್ರ ವನ್ನು ಅಮರೇಶ ನಾಯಕ ಬರೆಸಿದ್ದಾರೆ ಎಂದರೆ ಸರಿ.

**ಪಾಟೀ ಸವಾಲು: ಪ್ರತಿವಾದಿ ನಂ 2 ವಾರಸುದಾರರ ಪರ ವಕೀಲರಾದ ಶ್ರೀ. ಎಮ್ ಡಿ ಎಚ್ ರವರಿಂದಃ-**

ನನ್ನ ಹೆಂಡತಿಯ ಹೆಸರು ಗುಂಡಮ್ಮ, ಗುಂಡಮ್ಮನ ಊರು ಗುರಗುಂಟಾ ಎಂದರೆ ಸರಿ. ಈ ಕೇಸಗೆ ಸಂಬಂದಪಟ್ಟಂತಹ ಕಾಗದ ಪತ್ರ ಗಳನ್ನು ನೋಡಿಲ್ಲಾ. ಅಮರೇಶನಾಯಕನ ತಮ್ಮನ ಹೆಸರು ರಂಗಸ್ವಾಮಿ ಆತ ಕಸಬಾ ಲಿಂಗಸೂರಿನಲ್ಲಿ ಇದ್ದಾನೆ ಎಂದರೆ ಸರಿ . ಅಮರೇಶ ನಾಯಕನಿಗೆ 3 ಜನ ಅಕ್ಕ ತಂಗಿಯರು ಎಂದರೆ ಸರಿ. ಇಬ್ಬರು ಅಣ್ಣ ತಮ್ಮಂದಿರು ಇದ್ದಾರೆ ಅಂತಾ ಹೇಳುತ್ತಾರೆ. ರಾಜಾ ಸರ್ಜಾನಾಯಕ ಎಲ್ಲಿ ಮೃತ ಪಟ್ಟರು ನನಗೆ ಗೊತ್ತಿಲ್ಲಾ. ಆತ ಹುಲಿಹೈದರನಲ್ಲಿ ಮೃತ ಪಟ್ಟ ಎಂದರೆ ಸರಿ. ಆತ ಹುಲಿಹೈದರನಲ್ಲಿ ಎಷ್ಟು ವರ್ಷ ವಾಸ ಇದ್ದ ನನಗೆ ಗೊತ್ತಿಲ್ಲಾ. ಅಮರೇಶನಾಯಲ ಮೂಲತಃ ಆಂಧ್ರಪ್ರದೇಶದ ಹುಲಿಗುಂಡಾ ಗ್ರಾಮದಲ್ಲಿ ಅಲ್ಲಿ ಜನಿಸಿದ್ದಾರೆ ಎಂದರೆ ಸರಿ.. ರಾಜಾ ಅಮರೇಶನಾಯಕ ಸುರಪುರದಲ್ಲಿ ಇದ್ದಾರೆ ಎಂದರೆ ಸರಿ. ನಾನು ಹುಟ್ಟಿ ಬೆಳೆದಿದ್ದು ಸುರಪುರ ತಾಲೂಕು ಎಂದರೆ ಸರಿ. ಅಮರೇಶನ ಹೆಂಡತಿ ಹೆಸರು ಗೊತ್ತಿಲ್ಲಾ. ಅಮರೇಶನ ಹೆಂಡತಿ ಸುರಪುರದಲ್ಲಿ ವಾಸವಿಲ್ಲಾ. ನಾನು ಅಮರೇಶನಾಯಕನ ಆಧಾರ ಕಾರ್ಡ ನಾನು ನೋಡಿಲ್ಲಾ. ಅಮರೇಶನಾಯಕ ಮತ ಚಲಾಯಿಸಿದ್ದು ನನಗೆ ಗೊತ್ತಿಲ್ಲಾ. ಅಮರೇಶ ನಾಯಕ ಯಾರ

ಮನೆಯಲ್ಲಿ ವಾಸವಿದ್ದಾನೆ ನನಗೆ ಗೊತ್ತಿಲ್ಲಾ. ಅಮರೇಶನಾಯಕ ಯಾವ ಓಣಿಯಲ್ಲಿ ವಾಸವಿದ್ದಾನೆ ಗೊತ್ತಿಲ್ಲಾ. ನನಗೆ ಈ ಕೇಸಿನ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ಅಮರೇಶನಾಯಕನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೇಂದರೆ ಸರಿಯಲ್ಲ.

**ಪಾಟೀ ಸವಾಲು: ಪ್ರತಿವಾದಿ ನಂ 4 ಮತ್ತು 5 ಪರ ವಕೀಲರಾದ ಶ್ರೀ. ಜೆ ವಿ ಪಿ ರವರಿಂದಃ-**

ನಾನು ಗುರುಗುಂಟಾಕ್ಕೆ 1971 ರಲ್ಲಿ ಬಂದಿದ್ದೇನೆ. ನಾನು ಗುರಗುಂಟಾದಲ್ಲಿ ಬಜ್ಜಿ ಬೋಂಡಾ ವ್ಯಾಪಾರ ಮಾಡುತ್ತೇನೆ. ನನ್ನದು ಎತ್ತುಗಳು, ಟ್ರ್ಯಾಕ್ಟರ ಇಲ್ಲಾ. ನಾನು ಒಕ್ಕಲುತನಮಾಡುವುದಿಲ್ಲಾ. ರಾಜಾಅಮರೇಶನಾಯಕನಿಗೆ ಎಷ್ಟು ಜನ ಅಕ್ಕ ತಂಗಿಯರು ಗೊತ್ತಿಲ್ಲಾ. ರಾಜಾಅಮರೇಶನಾಯಕನ ತಂದೆಗೆ ಊರಲ್ಲಿ ಮನೆ ಇದೇಯಾ ನನಗೆ ಗೊತ್ತಿಲ್ಲಾ. ಈ ದಾವೆಯನ್ನು ಎರಡು ಜಮೀನಿನ ಮೇಲೆ ಹಾಕಿದ್ದಾರೆ, ಸರ್ವೆ ನಂ 338 ಮತ್ತು 328 ದಾವಾ ಆಸ್ತಿಗಳು. ಸರ್ವೆ ನಂ 338 ರಲ್ಲಿ 16 ಎಕರೆ ಇದೆ ಮತ್ತು ಸರ್ವೆ ನಂ 328 ರಲ್ಲಿ 12 ಎಕರೆ ಇರಬಹುದು, ಇವು ಎರಡು ಗುರುಗುಂಟಾ ಸೀಮಾದಲ್ಲಿ ಇವೆ. ಈ ಎರಡು ಜಮೀನುಗಳು ಅಲ್ಲದೆ ಬೇರೆ ಆಸ್ತಿಗಳು ಈ ದಾವೆಯಲ್ಲಿ ಇದೇಯಾ ನನಗೆ ಗೊತ್ತಿಲ್ಲಾ. ರಾಜಾ ಅಮರೇಶನಾಯಕನಿಗೆ ಎತ್ತು, ಟ್ರ್ಯಾಕ್ಟರಗಳು ಇಲ್ಲಾ. ಅವರು ಒಕ್ಕಲುತನ ಹೇಗೆ ಮಾಡುತ್ತಾರೆ ನನಗೆ ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕನಿಗೆ ಒಟ್ಟು ಎಷ್ಟು ಜಮೀನು ನನಗೆ ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕನಿಗೆ ಹೇಗೆ ಬಂದಿದ್ದವು ಎಂದರೆ ಅಜ್ಜಿಯಿಂದ ಬಂದಿದ್ದವು ಎಷ್ಟು ಜಮೀನು ಬಂದಿದ್ದವು ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕನ ಮಕ್ಕಳು ಮತ್ತು ಹೆಂಡತಿ ಎಲ್ಲಿ ವಾಸವಿದ್ದಾರೆ ಗೊತ್ತಿಲ್ಲಾ. ಅಮರೇಶನಾಯಕನ ತಾಯಿಯ ಹೆಸರು ಗೊತ್ತಿಲ್ಲಾ. ಅವರ ಅಜ್ಜಿ ಹೆಸರು ಕೊಂಡಮ್ಮ. ಕೊಂಡಮ್ಮ ಅಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ಕೊಂಡಮ್ಮನ ಮಗನ ಹೆಸರು ಏನು ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕನ ತಂದೆಯ ಹೆಸರು ಗೊತ್ತಿಲ್ಲಾ. 30 -40 ವರ್ಷದ ಹಿಂದೆ ಇವರು ಬೇರೆ ಅಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕನಿಗೆ ಸರ್ವೆ ನಂ 35 ರಲ್ಲಿ 20 ಎಕರೆ 33 ಗುಂಟಾ ಬಂದಿತ್ತು ಎಂದರೆ ಗೊತ್ತಿಲ್ಲಾ. ಈ ಜಮೀನನ್ನು ರಾಜಾಸರ್ಜಪ್ಪನಾಯಕ ಉಳುಮೆ ಮಾಡುತ್ತಿರಲಿಲ್ಲ ನಿಂಗಪ್ಪ ಎನ್ನುವವರು ಟೆನ್ಯಾನ್ಸಿಯಲ್ಲಿ ಉಳುಮೆ ಮಾಡುತ್ತಿದ್ದಿದ್ದರಂದ ಲ್ಯಾಂಡ ಟ್ರಿಮಿನಲ್ ಅವರು ಅವರ ಹೆಸರಿಗೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲಾ. ರಾಜಾಸರ್ಜಪ್ಪನಾಯಕ ನನಗೆ ಅದರ ಹಣ ಬರೇಬಕು ಅಂತಾ ಅರ್ಜಿ ಸಲ್ಲಿಸಿ ಪರಿಹಾರ ಪಡೆದುಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಸರ್ವೆ ನಂ 28 ಮತ್ತು 29 ಇವು ಸೋಮಲಿಂಗಪ್ಪನಾಯಕ ಇವರ ಹೆಸರಿಗೆ ಬಂದಿದ್ದವು ಎಂದರೆ ಗೊತ್ತಿಲ್ಲಾ. ಸರ್ವೆ ನಂ ನಂ 337 ಮತ್ತು 338 ರಾಜಾಜಡಿಲಿಂಗನಾಯಕ ಮತ್ತು ರಾಜಾಗೋಸಲನಾಯಕ ರವರ ಪಾಲಿಗೆ ಬಂದಿತ್ತು ಎಂದರೆ ಗೊತ್ತಿಲ್ಲಾ. ನಾವು ರಾಜರು ಅಲ್ಲಾ ಕ್ಷತ್ರಿಯರು. ಜಟ್ಟಿ ನಮ್ಮ ಮನೆತನದ ಹೆಸರು ಎಂದರೆ ಸರಿ. ನಮ್ಮ ಜಾತಿಯೇ ಜಟ್ಟಿ ಜಾತಿ. ಗುರುಂಟಾದಲ್ಲಿ ಎಷ್ಟು ಜನ ರಾಜರಿದ್ದಾರೆ ಗೊತ್ತಿಲ್ಲಾ. ರಾಜಸೋಮಲಿಂಗಪ್ಪನಾಯಕ ಪಂಚಾಯಿತಿ ಅಧ್ಯಕ್ಷರು ಇದ್ದಾರೆ ಎಂದರೆ ಗೊತ್ತಿಲ್ಲಾ. ನನಗೆ ಉಳಿದ ರಾಜರು ಗೊತ್ತಿಲ್ಲಾ. ರಾಜರು ತಮ್ಮ ಮನೆತನದ ವ್ಯವಹಾರ ತಮ್ಮ ಹಿರಿಯರ ಮಧ್ಯೆಯೇ ಮಾಡಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲಾ. ನನ್ನ ಎದುರು ರಾಜರು ತಮ್ಮ ಮನೆತನದ ವ್ಯವಹಾರ ಮಾಡಿಲ್ಲಾ ಎಂದರೆ ಸರಿ. ದಾವಾ ಆಸ್ತಿಗೆ ನಾನು ಹೋಗಿ ಬಂದಿಲ್ಲಾ. ದಾವಾ ಆಸ್ತಿ ಎಷ್ಟು ಜಮೀನುಗಳು ಇವೆ ಗೊತ್ತಿಲ್ಲಾ, ದಾವಾ ಆಸ್ತಿಗಳು ಯಾರ ಹೆಸರಿನಲ್ಲಿ ಇವೆ ಗೊತ್ತಿಲ್ಲಾ. ಜಮೀನುಗಳನ್ನು ಯಾರು ಯಾರಿಗೆ ಯಾವಾಗ ಮಾರಾಟ ಮಾಡಿದ್ದಾರೆ ಗೊತ್ತಿಲ್ಲಾ. 1971 ರಿಂದ

ಮೊದಲು ಅವರ ಮನೆತನದಲ್ಲಿ ಏನು ಆಗಿದೆ ನನಗೆ ಗೊತ್ತಿಲ್ಲಾ. ನಂತರ ಏನು ವ್ಯವಹಾರ ಗೊತ್ತಿಲ್ಲಾ. ನಾನು ಅಡವಿಯಲ್ಲಿ ವಾಸವಿದ್ದೇನೆ ಅವರ ವ್ಯವಹಾರ ಗೊತ್ತಿಲ್ಲಾ. ನನಗೆ ಏನು ಗೊತ್ತಿಲ್ಲಾ ಅಮರೇಶನಾಯಕನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೇದಂರೆ ಸರಿಯಲ್ಲ. ಅಮರೇಶನಾಯಕನ ಹೆಡಂತಿ ಹೆಸರು ಗೊತ್ತಿಲ್ಲಾ. ಅವರ ತಮ್ಮನ ಹೆಸರು ಮತ್ತು ಅವನ ಹೆಂಡತಿ ಹೆಸರು ಗೊತ್ತಿಲ್ಲಾ. ನನಗೆ ಏನೂ ಗೊತ್ತಿಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೇಂದರೆ ಸರಿಯಲ್ಲ.

**ಪಾಟೀ ಸವಾಲು: ಪ್ರತಿವಾದಿ ನಂ 7 ಪರ ವಕೀಲರಾದ ಶ್ರೀ. ಕೆ ಸಿ ಎಸ್ ರವರಿಂದಃ-**

ಮೇಲಿನವರು ಮಾಡಿದ ಪಾಟಿ ಸವಾಲನ್ನು 7 ನೇ ಪ್ರತಿವಾದಿ ಅಳವಡಿಸಿಕೊಳ್ಳುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮ್ಹಾಡಲಾಯಿತು)

ಓ.ಹೇ.ಕೇ.ಸರಿ ಇದೆ.

Sd/-
**(ಉಂಡಿ ಮಂಜುಳಾ ಶಿವಪ್ಪ )**
ಹಿರಿಯ ಸಿವಿಲ್ ನ್ಯಾಯಾಧೀಶರು,
ಲಿಂಗಸೂಗುರು.